ನಾಳೆ ಮಡಿವಾಳರ ಸಂಘದ ವಾರ್ಷಿಕೋತ್ಸವ

ಮೈಸೂರು,ಜ.೭– ಮೈಸೂರು ತಾಲ್ಲೂಕು ವೀರಮಡಿವಾಳರ ಸಂಘದ ೮ನೇ ವಾರ್ಷಿಕೋತ್ಸವ ಮತ್ತು ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮವನ್ನು ಜ.೯ ರಂದು ಬೆಳಿಗ್ಗೆ ೧೦ ಗಂಟೆಗೆ ಮೈಸೂರು ತಾಲ್ಲೂಕಿನ ಆಲನಹಳ್ಳಿ ಗ್ರಾಮದ ಶ್ರೀ ಹುಲಿಕಾಳಮ್ಮ ದೇವಸ್ಥಾನ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಕಾರ್ಯಾಧ್ಯಕ್ಷ ಜಯರಾಮು ದುದ್ದಗೆರೆ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿತ್ರದುರ್ಗ ಸಂಸ್ಥಾನ ಮಠದ ಶ್ರೀ ಬಸವ ಮಾಚಿದೇವ ಸ್ವಾಮೀಜಿ ಅವರ ಉಪಸ್ಥಿತಿಯಲ್ಲಿ ನಡೆಯುವ ಕಾರ್ಯಕ್ರಮವನ್ನು ವರುಣಾ ಕ್ಷೇತ್ರದ ವಸತಿ ಯೋಜನೆಗಳ ಜಾಗೃತಿ ಸಮಿತಿ ಅಧ್ಯಕ್ಷ ಡಾ.ಯತೀಂದ್ರ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. ದಿನದರ್ಶಿಕೆಯನ್ನು ರಾಜ್ಯ ಮಡಿವಾಳ ಸಂಘದ ಅಧ್ಯಕ್ಷ ನಂಜಪ್ಪ ಬಿಡುಗಡೆ ಮಾಡುವರು. ಮಡಿವಾಳ ಮಾಚಿದೇವರ ಭಾವಚಿತ್ರವನ್ನು ಮುಡಾ ಅಧ್ಯಕ್ಷ ಡಿ.ಧ್ರುವಕುಮಾರ್ ಅನಾವರಣಗೊಳಿಸುವರು. ಹಲವು ಗಣ್ಯರು ಅತಿಥಿಗಳಾಗಿ ಭಾಗವಹಿಸುವರು ಎಂದು ತಿಳಿಸಿದರು.

ಸಂಘದ ಅಧ್ಯಕ್ಷ ಶಿವಣ್ಣ ದುದ್ದಗೆರೆ, ಪ್ರಧಾನ ಕಾರ್ಯದರ್ಶಿ ರಾಜು ಆಲನಹಳ್ಳಿ, ತಾಲ್ಲೂಕು ಮಹಿಳಾ ಅಧ್ಯಕ್ಷೆ ಮಮತಾ, ತಾಲ್ಲೂಕು ಗೌರವಾಧ್ಯಕ್ಷೆ ಸವಿತಾ, ತಾಲ್ಲೂಕು ಕಾರ್ಯದರ್ಶಿ ನೇತ್ರಾವತಿ, ಗೌರವ ಸಲಹೆಗಾರ ಸಿದ್ದಪ್ಪಾಜಿ ಆಲನಹಳ್ಳಿ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ನಾಳೆ ಕುವೆಂಪು ವಿಶ್ವಮಾನವ ಸಂದೇಶ ಜಾಥಾದ ಸಮಾರೋಪ

ಮೈಸೂರು,ಜ.೭– ಮಾನವ ಬಂಧುತ್ವ ವೇದಿಕೆ ವತಿಯಿಂದ ಕುವೆಂಪು ಅವರ ಜನ್ಮದಿನದಂದು (ಡಿ.೨೯)ಕುಪ್ಪಳಿಯಿಂದ ಆರಂಭಿಸಿದ್ದ 'ಕುವೆಂಪು ವಿಶ್ವಮಾನವ ಸಂದೇಶ ಜಾಥಾ' ಜ.೯ ರಂದು ಮೈಸೂರಿನಲ್ಲಿ ಮುಕ್ತಾಯಗೊಳ್ಳಲಿದ್ದು, ಅಂದು ಮಾನಸ ಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ಮಧ್ಯಾಹ್ನ ೨.೩೦ಕ್ಕೆ ನಡೆಯುವ ಸಮಾರೋಪ ಸಮಾರಂಭವನ್ನು ಹಿರಿಯ ಸಾಹಿತಿ ಡಾ.ಸಿಪಿಕೆ ಉದ್ಘಾಟಿಸುವರು ಎಂದು ವೇದಿಕೆಯ ರಾಜ್ಯ ಸಂಚಾಲಕ ವಿಲ್ಫ್ರೆಡ್ ಡಿಸೋಜಾ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕುಪ್ಪಳ್ಳಿಯಿಂದ ಹೊರಟಿರುವ ವಿಶ್ವಮಾನವ ಸಂದೇಶ ಜಾಥಾ ೧೩ ದಿನಗಳ ಕಾಲ ಕರಾವಳಿ ಜಿಲ್ಲೆಗಳು ಸೇರಿದಂತೆ ಒಟ್ಟು ೮ ಜಿಲ್ಲೆಗಳಲ್ಲಿ ಸಂಚರಿಸಿ ೨೦ಕ್ಕೂ ಹೆಚ್ಚು ಕಾಲೇಜುಗಳಲ್ಲಿ ಕಾರ್ಯಕ್ರಮ ನಡೆಸಿ ಕುವೆಂಪು ಅವರ ವೈಚಾರಿಕ ಸಂದೇಶ ತಲುಪಿಸುವ ಪ್ರಯತ್ನ ಮಾಡಿದೆ ಎಂದರು.

ಸಮಾರೋಪ ಸಮಾರಂಭದಲ್ಲಿ ಚಿಂತಕ ಪ್ರೊ.ಕಾಳೇಗೌಡ ನಾಗವಾರ, ಹಿರಿಯ ರಂಗಕರ್ಮಿ ಸಿ.ಬಸವಲಿಂಗಯ್ಯ, ಚಿತ್ರನಟ ಚೇತನ್ ಮತ್ತಿತರ ಗಣ್ಯರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಸಮಾರಂಭದಲ್ಲಿ ಜಾಥಾ ತಂಡದ ಗಾಯಕರಾದ ಆಂಜನಪ್ಪ ಲೋಕಿಕೆರೆ, ಹುರಗಲವಾಡಿ ರಾಮಯ್ಯ, ಐರಣಿ ಚಂದ್ರು, ಮಂಜುಳ ಮತ್ತು ಬಳಗದವರು ಕುವೆಂಪು ಅವರ ವಿಶ್ವ ಮಾನವ ಸಂದೇಶ ಸಾರುವ ಗೀತೆಗಳನ್ನು ಪ್ರಸ್ತುತಪಡಿಸಲಿದ್ದಾರೆ. ಈ ಕಾರ್ಯಕ್ರಮಕ್ಕೆ ಮಾಜಿ ಸಚಿವ ಸತೀಶ್ ಜಾರಕಿಹೊಳಿ ಬೆಂಬಲವಾಗಿ ನಿಂತಿದ್ದಾರೆ ಎಂದರು.

ವೇದಿಕೆಯ ಜಿಲ್ಲಾ ಸಂಚಾಲಕರಾದ ಮಹಾದೇವ ಮುರುಡಗಹಳ್ಳಿ, ಎಂ.ಲೋಕೇಶ್, ನಟರಾಜ್ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಬ್ರಾಹ್ಮಣ ಮಹಾಸಭಾಗೆ ನೇಮಕ

ಮೈಸೂರು,ಜ.೭– ನಗರದ ಆದರ್ಶ ಸೇವಾ ಸಂಘದ ಅಧ್ಯಕ್ಷ ಜಿ.ಆರ್.ನಾಗರಾಜ ಅವರನ್ನು ಬೆಂಗಳೂರಿನ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ೨೦೧೮ನೇ ಸಾಲಿನ ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯ ಮತ್ತು ರಾಜ್ಯ ಉಪಾಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ ಎಂದು ಮಹಾಸಭಾ ಅಧ್ಯಕ್ಷ ಕೆ.ಎನ್.ವೆಂಕಟನಾರಾಯಣ ತಿಳಿಸಿದ್ದಾರೆ.

ಸಿರಿಗನ್ನಡ ವೇದಿಕೆಗೆ ನೇಮಕ

ಮೈಸೂರು,ಜ.೭– ಸಿರಿಗನ್ನಡ ವೇದಿಕೆಯ ತಾಲ್ಲೂಕು ಅಧ್ಯಕ್ಷರಾಗಿ ಸಾಹಿತಿ ಆದಿತ್ಯ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ವೇದಿಕೆ ಅಧ್ಯಕ್ಷ ಎಂಎಸ್‌ಮೆಕಟ ರಾಮಯ್ಯ ತಿಳಿಸಿದ್ದಾರೆ.

ಖುಷಿ ತಂದ ಜಯಲಕ್ಷ್ಮಿದೇವಿ ಕಾಲೇಜು ವಾರ್ಷಿಕೋತ್ಸವ

ಕನ್ನಡದಲ್ಲಿ ಹೆಚ್ಚು ಅಂಕ ಗಳಿಸಿದ ವರಲಕ್ಷ್ಮಿಗೆ ರಾಜಶೇಖರ ಕೋಟಿ ಸ್ಮರಣ ಪ್ರಶಸ್ತಿ

ಮೈಸೂರು,ಜ.೭– ಗುರು ಶಿಷ್ಯರ ಅಪೂರ್ವ ಸಮಾಗಮ; ಕನ್ನಡದಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿನಿ ವರಲಕ್ಷ್ಮಿಗೆ 'ಆಂದೋಲನ' ದಿನಪತ್ರಿಕೆ ಸಂಸ್ಥಾಪಕ ಸಂಪಾದಕರಾದ ರಾಜಶೇಖರ ಕೋಟಿ ಅವರ ಸ್ಮರಣ ಪ್ರಶಸ್ತಿ ಪ್ರದಾನ; ಸ್ಫೂರ್ತಿದಾಯಕ ಭಾಷಣ; ರಂಜಿಸಿದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯ ಕ್ರಮಗಳು.

ಕುವೆಂಪುನಗರದ ಗಾನಭಾರತೀ ವೀಣೆ ಶೇಷಣ್ಣ ಭವನದಲ್ಲಿ ಭಾನುವಾರ ಆಯೋಜಿಸಿದ್ದ ರಾಮಕೃಷ್ಣನಗರದ ಜಯಲಕ್ಷ್ಮಿದೇವಿ ಪದವಿ ಪೂರ್ವ ಕಾಲೇಜಿನ ೨೧ನೇ ವಾರ್ಷಿಕೋತ್ಸವ ಸಮಾರಂಭಕ್ಕೆ ಮೆರುಗು ತಂದ ನಡೆಗಳಿವು.

ಕಾಲೇಜಿನ ಆಡಳಿತ ಮಂಡಳಿ ರಾಜಶೇಖರ ಕೋಟಿ ಅವರ ನೆನಪಿನಲ್ಲಿ ಸ್ಥಾಪಿಸಿರುವ ರಾಜಶೇಖರ ಕೋಟಿ ಸ್ಮರಣ ಪ್ರಶಸ್ತಿಯನ್ನು ವರಲಕ್ಷ್ಮಿ ಅವರಿಗೆ 'ಆಂದೋಲನ' ದಿನಪತ್ರಿಕೆ ಸಂಪಾದಕ ರವಿ ಕೋಟಿ ಪ್ರದಾನ ಮಾಡಿದರು. ನಮ್ಮ ಅಪ್ಪಾಜಿಯ ಹೆಸರಿನಲ್ಲಿ ಪ್ರಶಸ್ತಿ ಸ್ಥಾಪಿಸಿರುವುದಕ್ಕೆ ಧನ್ಯವಾದ ಸಮರ್ಪಿಸಿದರು. ಇಲ್ಲಿಯವರೆಗೂ 'ಅಪ್ಪಾಜಿ' ಕಾಲೇಜಿಗೆ ನೀಡುತ್ತಿದ್ದ ಎಲ್ಲಾ ರೀತಿಯ ಸಹಕಾರವನ್ನೂ ಅದೇ ರೀತಿ ಮುಂದುವರಿಸಲಾಗುವುದು. ಅದು ನನ್ನ ಕರ್ತವ್ಯ ಹಾಗೂ ಅಪ್ಪಾಜಿಗೆ ಸಲ್ಲಿಸುವ ಗೌರವ ಎಂದು ರವಿ ಕೋಟಿ ಅವರು ತಿಳಿಸಿದರು.

ಗುರು ಶಿಷ್ಯರ ಸಮಾಗಮ: ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಡಾ.ವಿ.ಎನ್.ನಾಯಕ್ ಅವರ ಗುರುಗಳಾದ ಸಾಹಿತಿ ಪ್ರೊ.ಕೆ.ಬಿ.ಪ್ರಭುಪ್ರಸಾದ್, ರವಿ ಕೋಟಿ ಅವರ ಗುರುಗಳಾದ ಪ್ರೊ.ಕೆ.ವಿ.ಪ್ರಭಾಕರ್, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ವಿ.ಆರ್.ಶ್ಯಾಮಲಾ ಅವರ ಗುರುಗಳು ಭಾಗವಹಿಸಿದ್ದು ವಿಶೇಷವಾಗಿತ್ತು.

ಬಳಿಕ ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಸಭಾ ಕಾರ್ಯಕ್ರಮದ ನಂತರ ವಿದ್ಯಾರ್ಥಿಗಳು ಪ್ರಸ್ತುತಪಡಿಸಿದ ನಾಟಕ, ನೃತ್ಯ ಪೋಷಕರು, ವಿದ್ಯಾರ್ಥಿಗಳನ್ನು ರಂಜಿಸಿತು. ಮಹಿಳೆಯರ ಮೇಲಿನ ಅತ್ಯಾಚಾರವನ್ನು ಖಂಡಿಸುವ ನೃತ್ಯರೂಪಕ ಗಮನ ಸೆಳೆಯಿತು.

ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕಿ ವಿ.ಆರ್.ಶ್ಯಾಮಲಾ ಅವರು ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಸಾಹಿತಿ ಪ್ರೊ.ಪ್ರಭುಪ್ರಸಾದ್ ಮಾತನಾಡಿದರು. ಜಯಲಕ್ಷ್ಮಿದೇವಿ ವಿದ್ಯಾಸಂಸ್ಥೆ ಅಧ್ಯಕ್ಷ ಡಾ.ವಿ.ಎನ್.ನಾಯಕ್ ಅಧ್ಯಕ್ಷತೆ ವಹಿಸಿದ್ದರು. ಪ್ರೊ.ವೆಂಕಟರಾಮಯ್ಯ ಅವರು ಕ್ರೀಡೆ, ಸಾಂಸ್ಕೃತಿಕ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಿದರು. ಪುತಿನ ಗೀತೆಗಳ ಸ್ಪರ್ಧೆ ವಿಜೇತರಿಗೆ ಸಾಹಿತಿ ಡಾ.ಡಿ.ಬಿ.ರಾಮಚಂದ್ರಾಚಾರ್ ಬಹುಮಾನ ವಿತರಿಸಿದರು.

ಮಹಾಜನ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಪ್ರೊ.ಕೆ.ವಿ.ಪ್ರಭಾಕರ, ಶಿವಪ್ರಸಾದ್, ಬಸವಣ್ಣ, ಪ್ರಾಂಶುಪಾಲರಾದ ಕುಮುದವಲ್ಲಿ ಮುಂತಾದವರು ಉಪಸ್ಥಿತರಿದ್ದರು. ಉಪನ್ಯಾಸಕರಾದ ರೂಪಶ್ರೀ ಕಾಲೇಜಿನ ವಾರ್ಷಿಕ ವರದಿ ಓದಿದರು. ಸೌಮ್ಯ ನಿರೂಪಿಸಿದರು. ಕುಮಾರಿ, ಮಾನಸ, ಶ್ರುತಿ, ಖಾನ್ ಮುಂತಾದವರು ಉಪಸ್ಥಿತರಿದ್ದರು.

ಮೈಸೂರಿನ ಗಾನಭಾರತೀ ವೀಣೆ ಶೇಷಣ್ಣ ಭವನದಲ್ಲಿ ಆಯೋಜಿಸಿದ್ದ ಜಯಲಕ್ಷ್ಮಿದೇವಿ ಪದವಿ ಪೂರ್ವ ಕಾಲೇಜಿನ ೨೧ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಸಾಹಿತಿ ಪ್ರೊ.ಕೆ.ಬಿ.ಪ್ರಭುಪ್ರಸಾದ್ ಮಾತನಾಡಿದರು. ಜಯಲಕ್ಷ್ಮೀ ವಿದ್ಯಾಸಂಸ್ಥೆ ಅಧ್ಯಕ್ಷ ಡಾ.ವಿ.ಎನ್.ನಾಯಕ್, ವಿ.ಆರ್.ಶ್ಯಾಮಲಾ, ಪ್ರೊ.ವೆಂಕಟರಾಮಯ್ಯ, ಪ್ರೊ.ಕೆ.ಬಿ.ಪ್ರಭಾಕರ್, 'ಆಂದೋಲನ' ದಿನಪತ್ರಿಕೆ ಸಂಪಾದಕ ರವಿ ಕೋಟಿ ಮುಂತಾದವರು ಚಿತ್ರದಲ್ಲಿದ್ದಾರೆ.

ಜಯಲಕ್ಷ್ಮೀದೇವಿ ಕಾಲೇಜಿನ ವಾರ್ಷಿಕೋತ್ಸವದಲ್ಲಿ ವರಲಕ್ಷ್ಮಿ ಅವರಿಗೆ ರಾಜಶೇಖರ ಕೋಟಿ ಸ್ಮರಣ ಪ್ರಶಸ್ತಿಯನ್ನು ರವಿ ಕೋಟಿ ವಿತರಿಸಿದರು.

ಸಾಂಸ್ಕೃತಿಕ ಸ್ಪರ್ಧೆ ವಿಜೇತರು

ಮೈಸೂರು: ಜನಪದ ಗೀತೆ: ವಿ.ಎಸ್.ಚಂದನ್(ಪ್ರ), ಆರ್.ಅನಿಲ್(ದ್ವಿ), ಬಿ.ಶಶಿಕಾಂತ್(ತೃ), **ಭಾವಗೀತೆ:** ಕೀರ್ತಿಶ್ರೀ(ಪ್ರ), ಅನಿಲ್(ದ್ವಿ), ಸಿನಿಮಾ ಗೀತೆ: ಕೀರ್ತಿಶ್ರೀ(ಪ್ರ), ಚೇತನ್(ದ್ವಿ), ಸಿದ್ದರಾಜು(ತೃ), ದ್ವಿತೀಯ ಪಿಯುಸಿ ವಿಭಾಗದಲ್ಲಿ ಸುಷ್ಮಿತಾ(ಪ್ರ), ವರಲಕ್ಷ್ಮಿ(ದ್ವಿ), ನವೀನ್(ತೃ).

ಒಲೆ ರಹಿತ ಅಡುಗೆ ಸ್ಪರ್ಧೆ: ಕಿಶೋರ್–ಸುಷ್ಮಿತಾ(ಪ್ರ), ಕೀರ್ತಿಶ್ರೀ–ಸುರಭಿ(ದ್ವಿ), ದ್ವಿತೀಯ ಪಿಯುಸಿಯಲ್ಲಿ ಅನಿಲ್–ಮಹೇಶ್(ಪ್ರ), ವರಲಕ್ಷ್ಮೀ–ರಕ್ಷಿತ(ದ್ವಿ), ಸುಷ್ಮಿತ–ಸಿಂಧು(ತೃ).

ಸ್ಲೋ ಸೈಕಲ್ ಸ್ಪರ್ಧೆ: ಎಂ.ಬಿ.ಚೇತನ್(ಪ್ರ), ಸುಮಂತ್(ದ್ವಿ), ಪ್ರವೀಣ್(ತೃ), ಪ್ರಬಂಧ ಸ್ಪರ್ಧೆ: ಎಂ.ವಿ.ಸಂಜನಾ(ಪ್ರ), ಎಸ್.ರಕ್ಷಿತಾ(ದ್ವಿ).

೨೦೧೭–೧೮ನೇ ಸಾಲಿನ ಅತ್ಯುತ್ತಮ ವಿದ್ಯಾರ್ಥಿಗಳು: ದ್ವಿತೀಯ ಪಿಯುಸಿ **ವಾಣಿಜ್ಯಶಾಸ್ತ್ರ ವಿಭಾಗ:** ವೈ.ಚಂದನ್, **ಎಸ್.ರಕ್ಷಿತಾ, ಕಲಾ ವಿಭಾಗ:** ಆರ್.ಎಸ್.ಜಗದೀಶ್, ಬಿಂದು, **ವಿಜ್ಞಾನ ವಿಭಾಗ:** ರವಿಚಂದ್ರ ಅತ್ಯುತ್ತಮ ವಿದ್ಯಾರ್ಥಿಗಳಾಗಿದ್ದಾರೆ. ರಾಸೇಯೋ ರಾಜ್ಯಮಟ್ಟದ ಬಾಲಕಿಯರ ಯುವಜನೋತ್ಸವದಲ್ಲಿ ವಿ.ಸಿಂಧು, ಆರ್.ಚಂದನ, ಎನ್.ಐಶ್ವರ್ಯ ಭಾಗವಹಿಸಿ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.

ಕಾವೇರಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಶ್ವಾಸಮಾರ್ಗ ನಿರ್ವಹಣೆ ಕಾರ್ಯಾಗಾರ

ಶ್ವಾಸಮಾರ್ಗ ನಿರ್ವಹಣೆ ಮನುಷ್ಯ ಜೀವನದ ಪ್ರಶ್ನೆ: ಡಾ.ಎಸ್.ಸಚ್ಚಿದಾನಂದ್

ಮೈಸೂರು,ಜ.೭– ಕಾವೇರಿ ಹೆಲ್ತ್ ಅಂಡ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಇಂಡಿಯನ್ ಸೊಸೈಟಿ ಆಫ್ ಕ್ರಿಟಿಕಲ್ ಕೇರ್ ಮೆಡಿಸಿನ್ (ಐಎಸ್‌ಸಿಸಿಎಂ) ಮೈಸೂರು ಅಧ್ಯಾಯದ ಸಂಯುಕ್ತಾಶ್ರಯ ದಲ್ಲಿ ನಗರದ ಬನ್ನೂರು ಮುಖ್ಯ ರಸ್ತೆಯಲ್ಲಿರುವ ಆಸ್ಪತ್ರೆಯ ಸಭಾಂಗಣದಲ್ಲಿ ಆಯೋಜಿಸಿದ್ದ 'ಶ್ವಾಸಮಾರ್ಗ ನಿರ್ವಹಣೆ' ಕುರಿತ ಒಂದು ದಿನದ ಕಾರ್ಯಾಗಾರವನ್ನು ರಾಜ್ಯ ಸರ್ಕಾರದ ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕ ಡಾ.ಎಸ್.ಸಚ್ಚಿದಾನಂದ್ ಉದ್ಘಾಟನೆ ಮಾಡಿದರು.

ನಂತರ ಮಾತನಾಡಿದ ಅವರು, ಶ್ವಾಸ ಮಾರ್ಗ ನಿರ್ವಹಣೆ ಪರಿಜ್ಞಾನ ಕೇವಲ ತುರ್ತು ಚಿಕಿತ್ಸಾ ಘಟಕ, ಆಪರೇಷನ್ ಥಿಯೇಟರ್‌ನಲ್ಲಿ ಚಿಕಿತ್ಸೆ ನೀಡುವ ವೈದ್ಯರಿಗೆ ಮಾತ್ರವಲ್ಲದೆ ಎಂಬಿಬಿಎಸ್ ಮಾಡುತ್ತಿರುವ ವಿದ್ಯಾರ್ಥಿಗಳಿಗೂ ಈ ಬಗ್ಗೆ ಅರಿವು ಮೂಡಿಸಬೇಕಿದೆ. ಶ್ವಾಸಮಾರ್ಗ ನಿರ್ವಹಣೆ ಮನುಷ್ಯ ಜೀವನದ ಪ್ರಶ್ನೆಯಾಗಿರುವುದರಿಂದ ಪ್ರತಿಯೊಬ್ಬ ವೈದ್ಯರಿಗೂ ಇದರ ಸಾಮಾನ್ಯ ಜ್ಞಾನ ಅತ್ಯವಶ್ಯಕವಾಗಿರುತ್ತದೆ. ಈ ದೆಸೆಯಲ್ಲಿ ವೈದ್ಯಕೀಯ ಶಿಕ್ಷಣದ ಹಂತದಲ್ಲೇ ಇದನ್ನು ಪರಿಚಯಿಸಬೇಕಿದೆ ಎಂದರು.

ಮೈಸೂರು ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರಾದ ಡಾ.ದಾಕ್ಷಾಯಿಣಿ, ಕಾವೇರಿ ಹೆಲ್ತ್ ಅಂಡ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಮುಖ್ಯಸ್ಥ ಡಾ.ಜಿ.ಆರ್.ಚಂದ್ರಶೇಖರ್, ವ್ಯವಸ್ಥಾಪಕ ನಿದೇಶಕಿ ಡಾ.ಸರಳಾ ಚಂದ್ರಶೇಖರ್, ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಹಿರಿಯ ಪ್ರಾಧ್ಯಾಪಕರಾದ ಡಾ.ನಳಿನಿ ಕೋಟೇಕರ್, ಡಾ.ಮಂಜುನಾಥ್, ತುರ್ತು ಚಿಕಿತ್ಸಾ ವಿಭಾಗದ ಮುಖ್ಯಸ್ಥರಾದ ಡಾ.ಅಕ್ಕ ಮಹಾದೇವಿ, ಶ್ವಾಸಕೋಶ ತಜ್ಞ ಡಾ.ಜಯರಾಜ್, ಇಂಡಿಯನ್ ಸೊಸೈಟಿ ಆಫ್ ಅನೆಸ್ಥಿಜಿಯಾಲಜಿಸ್ಟ್ ಡಾ.ಮಹದೇವ್, ಡಾ.ಇಎಸ್‌ಎ ಕಾರ್ಯದರ್ಶಿ ಡಾ.ಪ್ರತಿಭಾ, ಐಎಸ್‌ಸಿಸಿಎಂ ಅಧ್ಯಕ್ಷ ಡಾ.ರಘುನಾಥ್, ಸೆಕ್ರೆಟರಿ, ಡಾ.ಬಸವರಾಜ್, ಆಸ್ಪತ್ರೆಯ ಮಧು, ಡಾ.ಅರವಿಂದ್, ಡಾ.ಅಭಯ್, ಡಾ.ನಂಜಪ್ಪ, ಕಿದ್ವಾಯಿ ಸ್ಮಾರಕ ದಂತಿ ಸಂಸ್ಥೆಯಲ್ಲಿ ಸಹ ಪ್ರಾಧ್ಯಾಪಕ ಡಾ.ಶಶಿಧರ್, ಬೆಂಗಳೂರಿನ ಫೋರ್ಟಿಸ್ ಆಸ್ಪತ್ರೆಯ ಅರಿವಳಿಕೆ ತಜ್ಞರಾದ ಡಾ.ಸುಶ್ಮಾ, ಆಸ್ಟ್ರೇಲಿಯಾದ ದ ಲೇಡಿ ಕ್ಲಿಂಟಲ್ ಆಸ್ಪತ್ರೆಯ ಅರಿವಳಿಕೆ ತಜ್ಞರಾದ ಡಾ.ಬಪೀತಾ, ಜೆಎಸ್‌ಎಸ್ ಅರಿವಳಿಕೆ ವಿಭಾಗದ ಸಹ ಪ್ರಾಧ್ಯಾಪಕ ಡಾ.ಅನಿಲ್ ಇನ್ನಿತರರು ಉಪಸ್ಥಿತರಿದ್ದರು. ಅತಿಥಿಗಳು, ಆಹ್ವಾನಿತ ವೈದ್ಯರು ಹಾಗೂ ಆಸ್ಪತ್ರೆಯ ವೈದ್ಯರು ಸೇರಿದಂತೆ ಒಟ್ಟು ೯೦ ಮಂದಿ ಪಾಲ್ಗೊಂಡಿದ್ದು ಕಾರ್ಯಾಗಾರದ ಯಶಸ್ಸಿಗೆ ಸಾಕ್ಷಿ.

CME AND WORK SHOP ON AIRWAY MANAGEMENT

> ತುರ್ತು ಚಿಕಿತ್ಸಾ ಘಟಕ, ಆಪರೇಷನ್ ಥಿಯೇಟರ್‌ನಲ್ಲಿನ ರೋಗಿಗಳ ಶ್ವಾಸಮಾರ್ಗದಲ್ಲಿ ಕೊಂಚ ಬದಲಾವಣೆ, ತೊಂದರೆಯುಂಟಾದರೂ ೩ ನಿಮಿಷಗಳಲ್ಲಿ ರೋಗಿ ಸಾವನ್ನಪ್ಪಬಹುದು. ಹಾಗಾಗಿ ಇಲ್ಲಿ ಕರ್ತವ್ಯ ನಿರ್ವಹಿಸುವ ವೈದ್ಯರು, ಸಿಬ್ಬಂದಿ ವರ್ಗದವರು ಅತ್ಯಂತ ಜಾಗರೂಕತೆಯಿಂದ ಕಾರ್ಯ ನಿರ್ವಹಿಸಬೇಕಿದೆ. ಇದನ್ನು ಕಾರ್ಯಾಗಾರದ ಮೂಲಕ ತಿಳಿಸಲಾಗುತ್ತಿದ್ದು, ಸಾಮಾನ್ಯ ರೋಗಿಯಲ್ಲಿ ಉಸಿರಾಟ ತೊಂದರೆಯಾದರೆ ಎಂತಹ ಅನಾಹುತ ಆಗುತ್ತದೆ ಎಂಬುದನ್ನು ಪ್ರಾಣಿಗಳ ಮೇಲಿನ ಪರೀಕ್ಷೆಗಳ ಮೂಲಕ ಪ್ರಾಯೋಗಿಕವಾಗಿ ತೋರಿಸಲಾಗುತ್ತಿದೆ
>
> -ಡಾ.ವೈದ್ಯನಾಥ್, ಕಾರ್ಯಾಗಾರದ ಆಯೋಜಕ ಕಾರ್ಯದರ್ಶಿ

ಕಸದ ರಾಶಿಗೆ ಕ್ರಿಮಿನಾಶಕ ಸಿಂಪಡಣೆ

ಎಕ್ಸೆಲ್ ಪ್ಲಾಂಟ್‌ನಲ್ಲಿ ಕೊಳೆತ ಕಸದ ದುರ್ವಾಸನೆ ತಪ್ಪಿಸಲು ಕ್ರಮ

ಮೈಸೂರು,ಜ.೭– ಆರ್ಟ್ ಆಫ್ ಲಿವಿಂಗ್ ಮತ್ತು ಮೈಸೂರು ಮಹಾನಗರ ಪಾಲಿಕೆ ಸಹಯೋಗದಲ್ಲಿ ಭಾನುವಾರ ನಗರದ ಎಕ್ಸೆಲ್ ಪ್ಲಾಂಟ್ ಆವರಣದಲ್ಲಿ ಕಸದ ರಾಶಿಗಳಿಗೆ ಇಎಂಐ ಕ್ರಿಮಿನಾಶಕ ಸಿಂಪಡಿಸುವ ಕಾರ್ಯಕ್ಕೆ ಸಂಸದ ಪ್ರತಾಪ್ ಸಿಂಹ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಎಕ್ಸೆಲ್ ಪ್ಲಾಂಟ್ ಆವರಣದಲ್ಲಿ ಕಸದಲ್ಲಿ ಕೊಳೆತು ದುರ್ವಾಸನೆ ತರುವ ಕ್ರಿಮಿಗಳನ್ನು ನಾಶ ಮಾಡಲು ಹಾಗೂ ಕಸದಲ್ಲಿರುವ ಈಸ್ಟ್ ಹಾಗೂ ಬ್ಯಾಕ್ಟೀರಿಯಾವನ್ನು ನಾಶ ಮಾಡುವ ಬಯೋ ರಾಸಾಯನಿಕ ಸಿಂಪಡಿಸಲಾಗಿದೆ. ಇದು ದುರ್ವಾಸನೆ ತಪ್ಪಿಸುವುದರ ಜತೆಗೆ, ಕಸವನ್ನೂ ತಿನ್ನುವುದರಿಂದ ಕಸದ ರಾಶಿಯೂ ಕಡಿಮೆಯಾಗುತ್ತದೆ. ಇದರಿಂದಾಗಿ ಈ ಭಾಗದ ಸುಮಾರು ೨೦ ಸಾವಿರಕ್ಕೂ ಹೆಚ್ಚು ಸ್ಥಳೀಯರಿಗೆ ಅನುಕೂಲವಾಗುತ್ತದೆ. ಆರ್ಟ್ ಆಫ್ ಲಿವಿಂಗ್ ಸಂಸ್ಥೆ ರಾಸಾಯನಿಕ ಸಿಂಪಡಿಸುವ ಜವಾಬ್ದಾರಿಯನ್ನು ನಿರ್ವಹಿಸಲಿದೆ ಎಂದರು.

ನಗರಪಾಲಿಕೆ ಆರೋಗ್ಯಾಧಿಕಾರಿ ರಾಮಚಂದ್ರ, ಉಪ ಮಹಾಪೌರರಾದ ರತ್ನಾ ಲಕ್ಷ್ಮಣ್, ಆರ್ಟ್ ಆಫ್ ಲಿವಿಂಗ್‌ನ ಕಿರಣ್ ಕುಲಕರ್ಣಿ ಇನ್ನಿತರರು ಉಪಸ್ಥಿತರಿದ್ದರು.

ಪ್ರೊ.ಲಕ್ಷ್ಮಣರಾವ್ ಆತ್ಮಾಭಿಮಾನ ಅನುಕರಣೀಯ

ಸ್ಮರಣೆ ಕಾರ್ಯಕ್ರಮದಲ್ಲಿ ಪ್ರೊ.ಟಿ.ವಿ.ವೆಂಕಟಾಚಲಶಾಸ್ತ್ರಿ ಅಭಿಮತ

ಮೈಸೂರು,ಜ.೭– ಎಂದಿಗೂ ಸರಳತೆ, ಸ್ನೇಹಪರತೆಯನ್ನು ಬಿಟ್ಟುಕೊಡದ ಜೆ.ಆರ್.ಲಕ್ಷ್ಮಣರಾವ್ ಅವರ ಆತ್ಮಾಭಿಮಾನ, ಆತ್ಮವಿಶ್ವಾಸ ಮತ್ತು ಸ್ನೇಹಪ್ರಿಯತೆ ಅನುಕರಣೀಯವಾದುದು ಎಂದು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿವೃತ್ತ ನಿರ್ದೇಶಕ ಪ್ರೊ.ಟಿ.ವಿ.ವೆಂಕಟಾಚಲಶಾಸ್ತ್ರಿ ಅಭಿಪ್ರಾಯಪಟ್ಟರು.

ಬ್ರೇಕ್‌ಥ್ರೂ ಸೈನ್ಸ್ ಸೊಸೈಟಿ ಹಾಗೂ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ಆಯೋ ಜಿಸಿದ್ದ ಹಿರಿಯ ವಿಜ್ಞಾನಿ ಪ್ರೊ.ಜೆ.ಆರ್.ಲಕ್ಷ್ಮಣ್ ರಾವ್ ಅವರ ಸ್ಮರಣ ಸಭೆಯಲ್ಲಿ ಮಾತನಾಡಿದ ಅವರು, 'ವಿಜ್ಞಾನ ಕರ್ನಾಟಕ'ಕ್ಕಾಗಿ ಅವರು ಪಟ್ಟ ಪರಿಶ್ರಮ ಅವಿರತ ವಾದುದು. ಸಮಕಾಲೀನ ಲೇಖಕರ ಬಗೆಗಿನ ಅವರ ಸ್ನೇಹಪರ ವರ್ತನೆ ಅನುಕರಣೀಯವಾದುದು. ಸಂಗೀತ ಇತ್ಯಾದಿ ಕ್ಷೇತ್ರಗಳಲ್ಲಿಯೂ ಆಸಕ್ತಿ ಹೊಂದಿದವರಾಗಿದ್ದರು ಎಂದು ಸ್ಮರಿಸಿದರು.

ಬಾಲ ವಿಜ್ಞಾನ ಪತ್ರಿಕೆ ಸಂಪಾದಕಿ ಶ್ರೀಮತಿ ಹರಿಪ್ರಸಾದ್ ಮಾತನಾಡಿ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತನ್ನು ಪ್ರಾರಂಭಿಸು ವಾಗ ಲಕ್ಷ್ಮಣರಾವ್ ಅವರು ಪಟ್ಟ ಪರಿಶ್ರಮ ಮತ್ತು ಬಾಲವಿಜ್ಞಾನ ನಿಯತಕಾಲಿಕೆಯನ್ನು ತರುವ ಸಲುವಾಗಿ ಮಾಡಿದ ಪ್ರಯತ್ನ ಅವಿಸ್ಮರಣೀಯವಾಗಿದೆ ಎಂದರು. ಜೆ.ಆರ್.ಲಕ್ಷ್ಮಣರಾವ್ ಅವರ ಪುತ್ರಿ ಅನುರಾಧ, ಬ್ರೇಕ್‌ಥ್ರೂ ಸೈನ್ಸ್ ಸೊಸೈಟಿಯ ರಾಜ್ಯಾಧ್ಯಕ್ಷ ಜಿ.ಸತೀಶ್ ಕುಮಾರ್, ಸಲಹೆಗಾರರಾದ ಬಿ.ರವಿ, ಕೆ.ಎ.ಅವಿನಾಶ್ ಮತ್ತಿತರರು ಭಾಗವಹಿಸಿದ್ದರು.

ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಆಯೋಜಿಸಿದ್ದ ಪ್ರೊ.ಲಕ್ಷ್ಮಣ್‌ರಾವ್ ಸ್ಮರಣ ಸಭೆಯಲ್ಲಿ ಬಾಲವಿಜ್ಞಾನ ಪತ್ರಿಕೆ ಸಂಪಾದಕಿ ಶ್ರೀಮತಿ ಹರಿಪ್ರಸಾದ್ ಮಾತನಾಡಿದರು.

ಜೆಎಸ್‌ಎಸ್ ಪ್ರೌಢಶಾಲೆ ವಾರ್ಷಿಕೋತ್ಸವ

ANNIVERSARY CELEBRATION

ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ಜೆಎಸ್‌ಎಸ್ ಆಂಗ್ಲಮಾಧ್ಯಮ ಪ್ರೌಢಶಾಲೆ ವಾರ್ಷಿಕೋತ್ಸವದಲ್ಲಿ ಶಾಲಾ ವಾರ್ಷಿಕ ಸಂಚಿಕೆ 'ಜ್ಞಾನ ಸೌರಭ'ವನ್ನು ಜೆಎಸ್‌ಎಸ್ ಮಹಾವಿದ್ಯಾಪೀಠದ ಸಾಮಾನ್ಯ ಶಿಕ್ಷಣ ವಿಭಾಗ ನಿರ್ದೇಶಕ ಚಿದ್ರೆ ಶಂಕರಯ್ಯಸ್ವಾಮಿ ಬಿಡುಗಡೆ ಮಾಡಿದರು. ಶಿಕ್ಷಕ ಮಲ್ಲಣ್ಣ, ಮುಖ್ಯಶಿಕ್ಷಕಿ ಎಚ್.ಎಂ.ಶೈಲಜಾ, ಪ್ರೊ.ಸಿ.ನಾಗಣ್ಣ, ಶಿಕ್ಷಕ ಚಾಮರಾಜಪ್ಪ ಚಿತ್ರದಲ್ಲಿದ್ದಾರೆ.

ರಾಜ್ಯಮಟ್ಟದ ಎನ್‌ಟಿಎಸ್‌ಇ ರ್‍ಯಾಂಕ್ ವಿಜೇತರು

ಮೈಸೂರಿನ ಜಯಲಕ್ಷ್ಮಿಪುರಂನ ಮಹಾಜನ ಕಾಲೇಜು ಆವರಣದಲ್ಲಿರುವ ಇನೋವೇಟಿವ್ ಮ್ಯಾಥಮೆಟಿಕಲ್ ಸೈನ್ಸ್ ಇನ್‌ಸ್ಟಿಟ್ಯೂಟ್‌ನ ವಿದ್ಯಾರ್ಥಿಗಳಾದ ಫಯಾಜ್ ಅಹಮದ್(೨ನೇ ಸ್ಥಾನ), ವೈ.ತಿಶೀಖಾ(ಪ್ರಮತಿ ಹಿಲ್ ವ್ಯೂ ಅಕಾಡೆಮಿ/೩ನೇ ಸ್ಥಾನ), ಕೆ.ವಿ.ಸುಧನ್ವ(ಆಚಾರ್ಯ ವಿದ್ಯಾಕುಲ/ ೧ನೇ ಸ್ಥಾನ) ಗಳಿಸಿದ್ದಾರೆ. ಅವರನ್ನು ಸಂಸ್ಥೆಯ ಸಂಸ್ಥಾಪಕ ಹಾಗೂ ಗಣಿತ ಉಪನ್ಯಾಸಕ ಟಿ.ಪಿ.ದಿನೇಶ್, ಭೌತಶಾಸ್ತ್ರ ಉಪನ್ಯಾಸಕ ಅಂತ್ರಿ ಮಲ್ಲಿಕಾರ್ಜುನ್ ಅಭಿನಂದಿಸಿದ್ದಾರೆ.

ಬುದ್ಧ ದಮ್ಮ ಸಮಿತಿಯ ಕ್ಯಾಲೆಂಡರ್ ಬಿಡುಗಡೆ

ಮೈಸೂರಿನ ಪಡುವಾರಹಳ್ಳಿಯಲ್ಲಿರುವ ಭಗವಾನ್ ಬುದ್ಧ ದಮ್ಮ ಸಮಿತಿ ಹೊರ ತಂದಿರುವ ೨೦೧೮ರ ದಿನದರ್ಶಿಕೆಯನ್ನು ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ತಮ್ಮ ಗೃಹ ಕಚೇರಿಯಲ್ಲಿ ಬಿಡುಗಡೆ ಮಾಡಿದರು. ಸಮಿತಿ ಅಧ್ಯಕ್ಷ ಜೆ.ರಾಜೇಂದ್ರಪ್ರಸಾದ್, ಕಾರ್ಯದರ್ಶಿ ಪಿ.ಚಂದ್ರಶೇಖರ್, ಪಡುವಾರಹಳ್ಳಿ ಗ್ರಾಮಸ್ಥರಾದ ಎಂ.ಮಹದೇವು, ಶ್ರೀನಿವಾಸ್, ಮಹೇಂದ್ರ ಮೊದಲಾದವರು ಹಾಜರಿದ್ದರು.

ವಿಜ್ಞಾನ ಪರಿಷತ್‌ನ ವಿಜ್ಞಾನೋತ್ಸವ ಸಂಪನ್ನ

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್‌ನ ನಗರ ಘಟಕದಿಂದ ಮೈಸೂರಿನ ಹಾರ್ಡ್ವಿಕ್ ಪ್ರೌಢಶಾಲೆಯಲ್ಲಿ ಏರ್ಪಡಿಸಲಾಗಿದ್ದ ೨೦೧೭-೧೮ನೇ ಸಾಲಿನ ವಿಜ್ಞಾನೋತ್ಸವ ಸಂಪನ್ನ ಸಮಾರಂಭದಲ್ಲಿ ನಿವೃತ್ತ ಪ್ರಾಧ್ಯಾಪಕ ಸಾಧು ಶಂಕರ್ ಉಪನ್ಯಾಸ ನೀಡಿದರು. ಪರಿಷತ್ತಿನ ಸಂಚಾಲಕ, ಶಿಕ್ಷಕ ಅನಂತರಾಮು, ಮುಖ್ಯ ಶಿಕ್ಷಕ ಗುರುಭಕ್ತಯ್ಯ, ಶ್ರೀಮತಿ ಹರಿಪ್ರಸಾದ್ ಚಿತ್ರದಲ್ಲಿದ್ದಾರೆ.

ಕೇಶಾಲಂಕಾರಕ್ಕೆ ಹೋದ ವ್ಯಕ್ತಿ ನಾಪತ್ತೆ



ಮೈಸೂರು,ಜ.೭– ಕುವೆಂಪುನಗರ ಪೊಲೀಸ್ ಠಾಣೆ ವ್ಯಾಪ್ತಿಯಿಂದ ವ್ಯಕ್ತಿಯೊಬ್ಬರು ಕಾಣೆಯಾಗಿದ್ದಾರೆ.

ಶ್ರೀರಾಂಪುರ ಬಡಾವಣೆಯ ನಿವಾಸಿ ಬಿ.ಮಹದೇವು ಡಿ. ೩೧ರಂದು ಬೆಳಿಗ್ಗೆ ಮನೆಯಿಂದ ಹೇರ್ ಕಟಿಂಗ್ ಮತ್ತು ಶೇವಿಂಗ್ ಮಾಡಿಸಿಕೊಂಡು ಬರುವುದಾಗಿ ತಿಳಿಸಿ ಹೋದವರು ವಾಪಸ್ ಬಂದಿಲ್ಲ ಎಂದು ದೂರಿನಲ್ಲಿ ತಿಳಿಸಲಾಗಿದೆ.

೫.೬ ಅಡಿ ಎತ್ತರ, ಕೋಲು ಮುಖ, ಸಾಧಾರಣ ಮೈಕಟ್ಟು, ಎಣ್ಣೆಗೆಂಪು ಬಣ್ಣ, ಬಲಗೈಯಲ್ಲಿ ೪ ಬೆರಳುಗಳಿವೆ, ಕಾಣೆಯಾದ ದಿನ ಬಿಳಿ ಬಣ್ಣದ ಅಂಗಿ, ಕಪ್ಪು ಬಣ್ಣದ ಪ್ಯಾಂಟ್ ಧರಿಸಿದ್ದರು. ಈ ಚಹರೆಯ ವ್ಯಕ್ತಿ ಕಂಡುಬಂದಲ್ಲಿ ಕುವೆಂಪು ನಗರ ಪೊಲೀಸ್ ಠಾಣೆಗೆ (ದೂ.ಸಂ:೦೮೨೧-೨೪೧೮೧೩೯) ತಿಳಿಸುವಂತೆ ಕೋರಲಾಗಿದೆ.